KACM200001042022

# ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಕಡೂರು

ಉಪಸ್ಥಿತರುಃ- ಶ್ರೀಮತಿ. ಸುಜಾತ ಸುವರ್ಣ ಬಿ,
ಬಿ.ಕಾಂ., ಎಲ್.ಎಲ್.ಬಿ.,
ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ,
ಕಡೂರು, ಚಿಕ್ಕಮಗಳೂರು ಜಿಲ್ಲೆ.

**ಅಸಲು ದಾವಾ ಸಂಖ್ಯೆ 35/2022**

ದಿನಾಂಕಃ 17 ನೇ ಫೆಬ್ರವರಿ-2023.

ವಾದಿಯರು ಃ

1. ಶ್ರೀಮತಿ. ಸುಮತಿ,
ಶ್ರೀಮತಿ. ಜಾನಕಮ್ಮ ಮತ್ತು
ಶ್ರೀ ಮಂಜುನಾಥ ರವರ ಮಗಳು,
ವಯಸ್ಸುಃ ಸುಮಾರು 52 ವರ್ಷ,

2. ಶ್ರೀಮತಿ. ಸುನಿತಾ,
ಕೋಂ ಲೇಟ್ ಹರೀಶ್,
ಶ್ರೀಮತಿ. ಜಾನಕಮ್ಮನವರ ಮಗಳು,
ವಯಸ್ಸುಃ ಸುಮಾರು 49 ವರ್ಷ,

ವಾದಿಯರಿಬ್ಬರೂ ವ್ಯವಸಾಯಗಾರರು,
ವಾಸಃ ತೋಟದಮನೆ,
ಗೋವಿಂದಪುರ ರಸ್ತೆ,
ಚಿಕ್ಕಂಗಳ ಗ್ರಾಮ, ಬೀರೂರು ಹೋಬಳಿ,
ಕಡೂರು ತಾಲ್ಲೂಕು.

(ವಾದಿಯರ ಪರವಾಗಿಃ ಶ್ರೀ ಎಂ.ಎಸ್.ಹೆಳವಾರ್, ವಕೀಲರು)

- ವಿರುದ್ಧ -

ಪ್ರತಿವಾದಿಯರು ಃ

1. ಶ್ರೀಮತಿ. ವನಜಾಕ್ಷಿ,
ಕೋಂ ಲೇಟ್ ರಂಗಯ್ಯ,
ವಯಸ್ಸುಃ ಸುಮಾರು 58 ವರ್ಷ,

2. ಕುಮಾರಿಃ ನಿಖಿತ,
ತಂದೆಃ ಲೇಟ್ ರಂಗಯ್ಯ,
ವಯಸ್ಸುಃ ಸುಮಾರು 30 ವರ್ಷ,

3. ಕುಮಾರಿಃ ಲಿಖಿತ,
ತಂದೆಃ ಲೇಟ್ ರಂಗಯ್ಯ,
ವಯಸ್ಸುಃ ಸುಮಾರು 25 ವರ್ಷ,

(ಪ್ರತಿವಾದಿಯರ ಪರವಾಗಿಃ ಶ್ರೀ ಕೆ.ಎ.ಶಾಂತಪ್ಪ, ವಕೀಲರು)

<u>ಮಧ್ಯಂತರ ಅರ್ಜಿ ಸಂಖ್ಯೆ-1 ರ ಪಕ್ಷಗಾರರು</u>

ಅರ್ಜಿದಾರರು /
ವಾದಿಯರು ಃ ಶ್ರೀಮತಿ. ಸುಮತಿ ಮತ್ತು ಇನ್ನೊಬ್ಬರು.

- ವಿರುದ್ಧ -

ಎದುರುದಾರರು /
ಪ್ರತಿವಾದಿಯರು ಃ ಶ್ರೀಮತಿ. ವನಜಾಕ್ಷಿ ಮತ್ತು ಇತರರು.

**ಅರ್ಜಿದಾರರು / ವಾದಿಯರು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಸಹವರ್ತಿ ಕಲಂ 151 ರನ್ವಯ ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ: 1 ರ ಮೇಲಿನ ಆದೇಶ.**

ಅರ್ಜಿದಾರರು / ವಾದಿಯರು ಮಧ್ಯಂತರ ಅರ್ಜಿ ಸಂಖ್ಯೆ:1 ನ್ನು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಸಹವರ್ತಿ 151 ರ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ, ಅರ್ಜಿಯಲ್ಲಿ ನಮೂದಿಸಿರುವ ಆಸ್ತಿಗಳನ್ನು ಈ ದಾವೆಯು ಅಂತಿಮ ತೀರ್ಪು ಆಗುವವರೆಗೂ ಮಾರಾಟ ಮಾಡಬಾರದು ಮತ್ತು ಯಾವುದೇ ಋಣಭಾರ ಹೊರಿಸಬಾರದು ಎಂದು ಪ್ರತಿವಾದಿಯರಿಗೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಬೇಕೆಂದು ಕೋರಿಕೊಂಡಿರುತ್ತಾರೆ.

2. ಅರ್ಜಿದಾರರು ಮಧ್ಯಂತರ ಅರ್ಜಿ-1 ಕ್ಕೆ ಪೂರಕವಾಗಿ ತಮ್ಮ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೆ. ಆ ಪ್ರಮಾಣ ಪತ್ರದ ಸಾರಾಂಶ ಈ ಕೆಳಗಿನಂತಿದೆ.

ದಿವಂಗತಃ ರಂಗಯ್ಯ ಇವರು ಬರೆದುಕೊಟ್ಟಂತಹ ಡೈರಿ, ಜಿ.ಪಿ.ಎ., ವಿಲುನಾಮೆಗಳು ರಂಗಯ್ಯ ತೀರಿಕೊಂಡ ನಂತರ ಜಾನಕಮ್ಮ ಇವರು ದಾವಾ ಆಸ್ತಿಗಳ ಮಾಲೀಕರು ಎಂದು ಕಂಡು

ಬಂದಿದ್ದು, ಜಾನಕಮ್ಮ ತೀರಿಕೊಂಡ ನಂತರ ವಾದಿಯರು ಜಾನಕಮ್ಮ ಇವರ ಕಾನೂನು ಬದ್ಧ ಪ್ರತಿನಿಧಿಗಳಾಗಿ ದಾವಾ ಆಸ್ತಿಗಳ ಸ್ವಾಧೀನವನ್ನು ಹೊಂದಿ ಅನುಭವಿಸಿಕೊಂಡು ಬಂದಿರುತ್ತಾರೆ. ವಾದಿಯರಿಬ್ಬರೂ ರಂಗಯ್ಯ ಮತ್ತು ಜಾನಕಮ್ಮನೊಂದಿಗೆ ವಾಸವಾಗಿದ್ದು, ಒಟ್ಟು ಕುಟುಂಬದಲ್ಲಿ ನಿರಂತರವಾಗಿ ವಾಸವಾಗಿದ್ದು, ಮೇಲ್ನೋಟಕ್ಕೆ ಸಮ್ಮತವಾದ ದಾವೆಯನ್ನು ಹೊಂದಿರುತ್ತಾರೆ.

1 ನೇ ಪ್ರತಿವಾದಿಯರು ರಂಗಯ್ಯ ಇವರ 2 ನೇ ಹೆಂಡತಿಯಾಗಿದ್ದು, 2 ಮತ್ತು 3 ನೇ ಪ್ರತಿವಾದಿಯರು 1 ನೇ ಪ್ರತಿವಾದಿ ರಂಗಯ್ಯ ಇವರ ಮದುವೆ ಸಂಬಂಧವಾಗಿ ಹುಟ್ಟಿದ್ದು, ಎಲ್ಲಾ ದಾಖಲಾತಿಗಳು ಕೂಡ ರಂಗಯ್ಯ ಮತ್ತು ಪ್ರತಿವಾದಿ-1 ರಿಂದ 3 ರವರು ಒಟ್ಟಿಗೆ ವಾಸವಾಗಿದ್ದಾರೆಂದು ಮತ್ತು 1 ನೇ ಎದುರುದಾರರು ಎಲ್ಲಾ ನಡವಳಿಕೆಯಲ್ಲಿ ನೀಡಿದ ವಿಳಾಸವನ್ನು ಗಮನಿಸಿದಾಗ ಅವರುಗಳು ಕಡೂರು ತಾಲ್ಲೂಕಿನ ಛತ್ರದ ಬೀದಿಯಲ್ಲಿ ವಾಸವಾಗಿದ್ದಾರೆಂದು ನಮೂದಿರುತ್ತದೆ. ದಾವಾ ಆಸ್ತಿಗಳು ರಂಗಯ್ಯ ಮತ್ತು ಜಾನಕಮ್ಮ ಇವರ ಸ್ವಯಾರ್ಜಿತ ಆಸ್ತಿಗಳಾಗಿದ್ದು, ಆ ವ್ಯವಸಾಯದ ಭೂಮಿಗಳು ಜಂಟಿ ಕುಟುಂಬದ ಜಂಟಿ ಸ್ವಾಧೀನದಲ್ಲಿ ಇರುತ್ತದೆ. ಪ್ರತಿವಾದಿಯರಿಗೆ ರಂಗಯ್ಯ ಮತ್ತು ಜಾನಕಮ್ಮ ಜೀವಂತವಿರುವಾಗೆ ದಾವಾ ಆಸ್ತಿಗಳಲ್ಲಿ ಯಾವುದೇ ರೀತಿಯ ಹಕ್ಕು, ಸ್ವಾಧೀನ ಮತ್ತು ಹಿತಾಸಕ್ತಿ ಇರುವುದಿಲ್ಲ. ಪ್ರತಿವಾದಿ-

1 ರಿಂದ 3 ರವರು ರಂಗಯ್ಯ ಹಾಗೂ ಜಾನಕಮ್ಮ ಬದುಕಿದ್ದಾಗ ಯಾವತ್ತೂ ಸ್ವಾಧೀನ ಹೊಂದಿರುವುದಿಲ್ಲ. ಆದರೆ ಪ್ರತಿವಾದಿಗಳು ರಾಜಕೀಯ ಪ್ರಭಾವ ಬೀರಿ ಅವರ ಹೆಸರಿಗೆ ಖಾತೆ ಮಾಡಿಸಿಕೊಂಡು ಮತ್ತು ವಾದಿಯರನ್ನು ಬಲವಂತವಾಗಿ ತೋಟದ ಮನೆ ಮತ್ತು ಆಸ್ತಿಯಿಂದ ಹೊರಹಾಕಲು ಪ್ರಯತ್ನಪಡುತ್ತಿದ್ದಾರೆ. ವಾಸ್ತವವಾಗಿ ಪ್ರತಿವಾದಿಯವರು ಮನೆಯೊಳಗೆ ಅತಿಕ್ರಮ ಪ್ರವೇಶ ಮಾಡಿ ಮನೆಯಲ್ಲಿದ್ದಂತಹ ಬೆಲೆ-ಬಾಳುವ ವಸ್ತುಗಳನ್ನು ಕಳವು ಮಾಡಿಕೊಂಡು ಹೋಗಿದ್ದು, ವಾದಿಯರು ಈ ಬಾಬ್ತು ಪೊಲೀಸರಿಗೆ ದೂರನ್ನು ನೀಡಿರುತ್ತಾರೆ. ಒಂದು ವೇಳೆ, ಪ್ರತಿವಾದಿಯರಿಗೆ ವಾದಿಯರ ಸ್ವಾಧೀನಕ್ಕೆ ತೊಂದರೆ ನೀಡದಂತೆ ತಡೆಯಾಜ್ಞೆ ನೀಡದೇ ಇದ್ದಲ್ಲಿ, ವಾದಿಯರಿಗೆ ತುಂಬಲಾರದ ನಷ್ಟ ಉಂಟಾಗುತ್ತದೆ. ವಾದಿಯರು ಸಮ್ಮತವಾದ ದಾವೆಯನ್ನು ಹೊಂದಿರುತ್ತಾರೆ. ಆದ್ದರಿಂದ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಬೇಕೆಂದು ಕೋರಿಕೊಂಡಿರುತ್ತಾರೆ.

3. ಪ್ರತಿವಾದಿಯರು ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆ. ಪ್ರತಿವಾದಿಯರು ಮೇಮೋವನ್ನು ಸಲ್ಲಿಸಿ ಪ್ರತಿವಾದ ಪತ್ರವನ್ನು ಅರ್ಜಿಗೆ ತಕರಾರು ಎಂದು ಪರಿಗಣಿಸಬೇಕಾಗಿ ಕೋರಿಕೊಂಡಿರುತ್ತಾರೆ. ತಕರಾರಿನ ಸಾರಾಂಶ ಈ ಕೆಳಗಿನಂತಿರುತ್ತದೆ.

ವಾದಪತ್ರದ ಅಂಶಗಳು ಸುಳ್ಳಾಗಿರುತ್ತದೆ. ಕೆ.ಆರ್.ರಂಗಯ್ಯ ಇವರು ವಾದಪತ್ರದ 25 ನೇ ಪ್ಯಾರಾದಲ್ಲಿ ಹೇಳಿರುವಂತೆ ಅವರ ಡೈರಿಯಲ್ಲಿ ಜಾನಕಮ್ಮ ಇವರನ್ನು ಹೆಂಡತಿ ಎಂದು ತೋರಿಸಿರುತ್ತಾರೆ ಎನ್ನುವುದು ಸುಳ್ಳಾಗಿರುತ್ತದೆ. 1 ನೇ ಪ್ರತಿವಾದಿಯು ಕೆ.ಆರ್.ರಂಗಯ್ಯ ಇವರ ಕಾನೂನು ಬದ್ಧ ಹೆಂಡತಿಯಾಗಿದ್ದು, ಅವರ ವಿವಾಹವು ರಂಗನಾಥ ಸ್ವಾಮಿ ದೇವಾಲಯದ ಭವನ, ವಗರೇಹಳ್ಳಿಯಲ್ಲಿ ಸಂಪ್ರದಾಯದಂತೆ ನೆರವೇರಿದ್ದು, 1 ನೇ ಪ್ರತಿವಾದಿಯು ಕೆ.ಆರ್.ರಂಗಯ್ಯ ಇವರ ಸಹೋದರಿಯ ಮಗಳಾಗಿದ್ದು, ಇಬ್ಬರೂ ಕೂಡ ಕುರುಬ ಜನಾಂಗಕ್ಕೆ ಸೇರಿದವರಾಗಿದ್ದು, 2 ಮತ್ತು 3 ನೇ ಪ್ರತಿವಾದಿಯರು ಕೆ.ಆರ್.ರಂಗಯ್ಯ ಇವರ ಮಕ್ಕಳಾಗಿದ್ದು, ದಾವಾ ಆಸ್ತಿಗಳು ಕೆ.ಆರ್.ರಂಗಯ್ಯ ಇವರು ಜೀವಂತ ಇರುವಾಗ ಸಂಪಾದನೆಯನ್ನು ಮಾಡಿದ್ದು, 1 ನೇ ಪ್ರತಿವಾದಿ ಮತ್ತು ಅವರ ಗಂಡ ಕೆ.ಆರ್.ರಂಗಯ್ಯ ಇವರು ದಾವಾ ಆಸ್ತಿಗಳ ವ್ಯವಹರಣೆಯನ್ನು ಮಾಡುತ್ತಿದ್ದು, ಕೆ.ಆರ್.ರಂಗಯ್ಯ ಇವರು ಆಸ್ತಿಯ ಮಾಲೀಕರಾಗಿ ಸ್ವಾಧೀನವನ್ನು ಅನುಭವಿಸಿಕೊಂಡು ಬಂದಿರುತ್ತಾರೆ.

ಕೆ.ಆರ್.ರಂಗಯ್ಯ ಇವರು ಜೀವಂತ ಇರುವಾಗ ಕ್ಯಾನ್ಸರ್ ಖಾಯಿಲೆಯಿಂದ ಬಳಲಿ ಹಾಸಿಗೆ ಹಿಡಿದಿದ್ದರು. ಕೆ.ಆರ್.ರಂಗಯ್ಯ

ಇವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದು, ದಿನಾಂಕಃ 21.11.2008 ರಂದು ಮರಣ ಹೊಂದಿದ್ದು, ಪ್ರತಿವಾದಿಯರೇ ಅವರ ಅಂತಿಮ ವಿದಿವಿಧಾನಗಳನ್ನು ನೆರವೇರಿಸಿರುತ್ತಾರೆ. ತದನಂತರ ಪ್ರತಿವಾದಿಯರು ದಾವಾ ಆಸ್ತಿಗಳಿಗೆ ಮಾಲೀಕರಾಗಿ ಸ್ವಾಧೀನವನ್ನು ಅನುಭವಿಸಿಕೊಂಡು ಬಂದಿರುತ್ತಾರೆ. ಖಾತೆಯೂ ಕೂಡ ಅವರ ಹೆಸರಿಗೆ ಬದಲಾವಣೆಯಾಗಿ, ಸರ್ಕಾರಕ್ಕೆ ಕಂದಾಯವನ್ನು ಕೂಡ ಪಾವತಿಸುತ್ತಿದ್ದರು.

ವಾದಿಯರ ತಂದೆಯ ಹೆಸರು ಆದಿಮೂಲಂ ಮತ್ತು ತಾಯಿಯ ಹೆಸರು ಜಾನಕಮ್ಮ ಹಾಗೂ ಅವರಿಬ್ಬರ ಮದುವೆಯಿಂದಾಗಿ ವಾದಿಯರ ಜನನವಾಗಿದ್ದು, ಅವರ ತಂದೆ ತಾಯಿ ತಮಿಳು ಮೊದಲಿಯಾರ್ ಜನಾಂಗದವರಾಗಿರುತ್ತಾರೆ. ವಾದಿಯರ ತಾಯಿ ಜಾನಕಮ್ಮ ಇವರು ಸುಳ್ಳು ಮತ್ತು ಫೋರ್ಜರಿ ದಾಖಲಾತಿಗಳನ್ನು ಸೃಷ್ಟಿಸಿಕೊಂಡು ಪ್ರಧಾನ ಸಿವಿಲ್ ನ್ಯಾಯಾಲಯ, ಕಡೂರು ಇಲ್ಲಿ ಅಸಲು ದಾವಾ ಸಂಖ್ಯೆಃ 242/2009 ರಂತೆ ದಾವೆಯನ್ನು ಸಲ್ಲಿಸಿ, ಅವರನ್ನು ಕೆ.ಆರ್.ರಂಗಯ್ಯ ಇವರ ಹೆಂಡತಿ ಎಂದು ಘೋಷಣೆ ಮಾಡಬೇಕೆಂದು ಪರಿಹಾರವನ್ನು ಕೋರಿದ್ದು, ದಿನಾಂಕಃ17.11.2014 ರಂದು ಸದರಿ ದಾವೆಯು ವಜಾಗೊಂಡಿರುತ್ತದೆ. ಆ ದಾವೆಯ ವಿರುದ್ಧ ಕಡೂರಿನ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಆರ್.ಎ. ನಂಬರ್ 59/2014 ರಂತೆ

ಮೇಲ್ಮನವಿ ಸಲ್ಲಿಸಿದ್ದು, ಆ ಮೇಲ್ಮನವಿ ಕೂಡ ದಿನಾಂಕಃ 01.07.2019 ರಂದು ವಜಾಗೊಂಡಿರುತ್ತದೆ. ಪುನಃ ವಾದಿಯು ಅಸಲು ದಾವಾ 441/2014 ಎಂದು 1 ನೇ ಅಪರ ಸಿವಿಲ್ ನ್ಯಾಯಾಲಯ ಕಡೂರು ಇಲ್ಲಿ 1 ನೇ ಪ್ರತಿವಾದಿಯ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆಯ ಪರಿಹಾರ ಕೋರಿ ದಾವೆಯನ್ನು ಸಲ್ಲಿಸಿದ್ದು, ಆ ದಾವೆಯು ಕೂಡ ದಿನಾಂಕಃ 07.09.2020 ರಂದು ವಜಾಗೊಂಡಿರುತ್ತದೆ.

ಆ ದಾವೆಯ ವಿರುದ್ಧ ಜಾನಕಮ್ಮ ಇವರು ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ. ಆ ಎರಡೂ ದಾವೆಗಳಲ್ಲೂ ಕೂಡ ಜಾನಕಮ್ಮ ಇವರು ನಿ.ಪಿ-9 ವಿಲುನಾಮೆಯನ್ನು ಪುರಾವೆಗೊಳಿಸಿಲ್ಲ ಎಂದು ಅಭಿಪ್ರಯಿಸಿರುತ್ತದೆ. ಜಾನಕಮ್ಮ ಇವರು ಕೆ.ಆರ್.ರಂಗಯ್ಯ ಇವರ ಕಾನೂನು ಬದ್ಧ ಹೆಂಡತಿಯಾಗಿರುವುದಿಲ್ಲ. ಆದ್ದರಿಂದ, ವಾದಿಯು ದಿನಾಂಕಃ27.07.2008 ರ ಡೈರಿಯ ನಮೂದು ಮತ್ತು ದಿನಾಂಕಃ02.06.2008 ರ ಜಿ.ಪಿ.ಎ. ಪ್ರಕಾರ ಮತ್ತು ವಿಲುನಾಮೆ ದಿನಾಂಕಃ31.07.2008 ರ ಪ್ರಕಾರ ದಾವಾ ಆಸ್ತಿಯ ಮಾಲೀಕರು ಎಂದು ಸಲ್ಲಿಸಿದ ದಾವೆಯು ಕಾನೂನಿನ ಅಡಿಯಲ್ಲಾಗಲೀ, ವಸ್ತುಸ್ಥಿತಿಯಲ್ಲಾಗಲೀ ಊರ್ಜಿತವಾಗಿರುವುದಿಲ್ಲ.

ಜಾನಕಮ್ಮರವರು ಸ್ವತಃ ಕೆ.ಆರ್. ರಂಗಯ್ಯ ಇವರು 2 ವರ್ಷಗಳ ಕಾಲ ಕ್ಯಾನ್ಸರ್ ಖಾಯಿಲೆಯಿಂದ ಬಳಲುತ್ತಿರುತ್ತಾರೆ,

ಸಾಯುವುದಕ್ಕಿಂತ ಪೂರ್ವದಲ್ಲಿ ಎರಡೂವರೆ ವರ್ಷಗಳಿಂದ ಕೆ.ಆರ್.ರಂಗಯ್ಯ ಮಲಗಿದ್ದಲ್ಲೆ ಇದ್ದರು, ಅವರಿಗೆ ತೀವ್ರ ತರಹದ ಅನಾರೋಗ್ಯ ಇತ್ತು ಎಂಬುದನ್ನು ಒಪ್ಪಿಕೊಂಡಿರುತ್ತಾರೆ. ಆದ್ದರಿಂದ ವಾದಿಗೆ ದಾವಾ ಆಸ್ತಿಯಲ್ಲಿ ಯಾವುದೇ ರೀತಿಯಾದಂತಹ ಹಕ್ಕು, ಹಿತಾಸಕ್ತಿ, ಸ್ವಾಧೀನ ಇದ್ದಿರುವುದಿಲ್ಲ. ವಾದಿಗೆ ಈ ದಾವೆಯನ್ನು ಸಲ್ಲಿಸಲು ಯಾವುದೇ ರೀತಿಯ ಹಕ್ಕು ಇದ್ದಿರುವುದಿಲ್ಲ. ಈ ದಾವೆಗೆ ಯಾವುದೇ ರೀತಿಯ ಸಕಾರಣ ಇದ್ದಿರುವುದಿಲ್ಲ. ಆದ್ದರಿಂದ ಅರ್ಜಿಯನ್ನು ವಜಾಗೊಳಿಸಬೇಕೆಂದು ಕೋರಿಕೊಂಡಿರುತ್ತಾರೆ.

4. ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

5. ನ್ಯಾಯಾಲಯವು ನಿರ್ಧರಿಸಬೇಕಾದ ಅಂಶಗಳು ಈ ಕೆಳಗಿನಂತಿವೆಃ-

***1.*** ಮಧ್ಯಂತರ ಅರ್ಜಿ-*1*ರ ಅರ್ಜಿದಾರರು / ವಾದಿಯರು ಮೇಲ್ನೋಟಕ್ಕೆ ಸಾಬೀತುಪಡಿಸುವ ಪ್ರಕರಣವನ್ನು ಹೊಂದಿರುತ್ತಾರೆ ಎನ್ನುವುದನ್ನು ಸಾಬೀತುಪಡಿಸಿದ್ದಾರೆಯೇ*?*

***2.*** ಅರ್ಜಿದಾರರು / ವಾದಿಯರು ತಮ್ಮ ಪರವಾಗಿ ಅನುಕೂಲತೆಯ ಸಮತೋಲನವನ್ನು

ಹೊಂದಿರುತ್ತಾರೆ ಎನ್ನುವುದನ್ನು ಸಾಬೀತುಪಡಿಸಿದ್ದಾರೆಯೇ?

**3.** ಒಂದು ವೇಳೆ, ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶ ನೀಡದೇ ಇದ್ದಲ್ಲಿ, ತುಂಬಲಾರದ ನಷ್ಟ ಉಂಟಾಗುವ ಸಂಭವ ಇರುತ್ತದೆ ಎಂಬುದನ್ನು ವಾದಿಯರು ರುಜುವಾತುಪಡಿಸುವರೇ?

**4.** ಅರ್ಜಿದಾರರು / ಪ್ರತಿವಾದಿ ರವರು ಮಧ್ಯಂತರ ಅರ್ಜಿ-*1* ರಲ್ಲಿ ಕೋರಿದಂತೆ ದಾವೆ ಮುಗಿಯುವವರೆಗೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಪಡೆಯಲು ಅರ್ಹರೇ?

**5.** ಆದೇಶವೇನು?

6. ನ್ಯಾಯಾಲಯದ ಮುಂದಿರುವ ದಾವಾಂಶಗಳನ್ನು ಹಾಗೂ ದಾಖಲೆಗಳನ್ನು ಹಾಗೂ ಉಭಯ ವಕೀಲರ ವಾದವನ್ನು ಆಲಿಸಿ, ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಿದೆಃ-

ಅಂಶ-1ಃ ಭಾಗಶಃ ಸಕಾರಾತ್ಮಕವಾಗಿ,

ಅಂಶ-2ಃ ಸಕಾರಾತ್ಮಕವಾಗಿ,

ಅಂಶ-3ಃ ಸಕಾರಾತ್ಮಕವಾಗಿ,

ಅಂಶ-4ಃ ಭಾಗಶಃ ಸಕಾರಾತ್ಮಕವಾಗಿ,

ಅಂಶ-5ಃ ಈ ಕೆಳಕಂಡ ಕಾರಣಗಳಿಗಾಗಿ ಅಂತಿಮ ಆದೇಶದದಂತೆ.

## ಕಾ ರ ಣ ಗಳು

7. ಅಂಶ-1ಃ ವಾದಿಯರು ಈ ದಾವೆಯನ್ನು ದಾವಾ ಆಸ್ತಿಗಳಿಗೆ ಅವರೇ ಮಾಲೀಕರೆಂದು ಘೋಷಣೆ ಮಾಡಬೇಕೆಂದು ಮತ್ತು ಪ್ರತಿವಾದಿಯರು ಅವರ ಸ್ವಾಧೀನಕ್ಕೆ ತೊಂದರೆ ಕೊಡದಂತೆ ಶಾಶ್ವತ ನಿರ್ಬಂಧಕಾಜ್ಞೆಯ ಪರಿಹಾರದ ಆದೇಶವನ್ನು ಕೋರಿ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಅರ್ಜಿದಾರರ ಪ್ರಕಾರ ಜಾನಕಮ್ಮ ಇವರು ರಂಗಯ್ಯ ಇವರ ಹೆಂಡತಿಯಾಗಿದ್ದು, 1 ನೇ ಪ್ರತಿವಾದಿಯ ರಂಗಯ್ಯ ಇವರ 2 ನೇ ಹೆಂಡತಿಯಾಗಿದ್ದು, 2 ಮತ್ತು 3 ನೇ ಪ್ರತಿವಾದಿಯರು 1 ನೇ ಪ್ರತಿವಾದಿಯ ಮಕ್ಕಳಾಗಿರುತ್ತಾರೆ ಎಂಬುದಾಗಿರುತ್ತದೆ. ವಾದಿ ಮತ್ತು ಪ್ರತಿವಾದಿಯರು ಹಾಜರುಪಡಿಸಿದಂತಹ ದಾಖಲಾತಿಗಳನ್ನು ಗಮನಿಸಿದಾಗ ವಾದಿಯ ತಂದೆ ಆದಿಮೂಲಂ ಎಂದು ಅವರ ಶಾಲಾ ದಾಖಲಾತಿಯಲ್ಲಿ ನಮೂದಿರುತ್ತದೆ ಹಾಗೂ ಅಸಲು ದಾವಾ ಸಂಖ್ಯೆ 242/2009 ರ ತೀರ್ಪು ಪ್ರತಿಯನ್ನು ಗಮನಿಸಿದಾಗ, ವಾದಿಯ ತಾಯಿ ಜಾನಕಮ್ಮ ಇವರು 1 ನೇ ಪ್ರತಿವಾದಿಯ ವಿರುದ್ಧ ಅವರು ಕೆ.ಆರ್.ರಂಗಯ್ಯ ಇವರ ಕಾನೂನು ಬದ್ಧ ಹೆಂಡತಿ ಎಂದು ಘೋಷಣೆ ಮಾಡಬೇಕೆಂದು ಸಲ್ಲಿಸಿದಂತಹ ದಾವೆಯು ವಜಾಗೊಂಡಿರುತ್ತದೆ. ಈ

ತೀರ್ಪಿನ ವಿರುದ್ಧ ವಾದಿಯರು ಮೇಲ್ಮನವಿಯನ್ನು ಸಲ್ಲಿಸಿ ರದ್ದುಪಡಿಸಿಕೊಂಡ ಕುರಿತು ಯಾವುದೇ ದಾಖಲಾತಿಗಳು ನ್ಯಾಯಾಲಯದ ಸಮಕ್ಷಮ ಇದ್ದಿರುವುದಿಲ್ಲ. ಇದನ್ನು ಗಮನಿಸಿದಾಗ ವಾದಿಯರು ಕೆ.ಆರ್.ರಂಗಯ್ಯ ಇವರ ವಾರಸುದಾರರು ಅಲ್ಲವೆಂದು ಕಂಡು ಬರುತ್ತದೆ.

**8.** ವಾದಿಯ ಪ್ರಕಾರ, ಅವರ ತಾಯಿ ಜಾನಕಮ್ಮ ಇವರಿಗೆ ಕೆ.ಆರ್. ರಂಗಯ್ಯ ಇವರು ಸರ್ವತ್ರ ಅಧಿಕಾರ ಪತ್ರ ಬರೆದುಕೊಟ್ಟು, ದಾವಾ ಆಸ್ತಿಯನ್ನು ಸ್ವಾಧೀನ ಕೊಟ್ಟಿರುತ್ತಾರೆ ಎಂಬುದಾಗಿರುತ್ತದೆ. ಅವರ ಪ್ರಕಾರ, ಕೆ.ಆರ್. ರಂಗಯ್ಯ ಇವರು ಅವರಿಗೆ ವಿಲುನಾಮೆ ಬರೆದುಕೊಟ್ಟಿದ್ದಾರೆ ಎಂಬುದಾಗಿರುತ್ತದೆ. ಪ್ರತಿವಾದಿಯರ ಪ್ರಕಾರ ಕೆ.ಆರ್.ರಂಗಯ್ಯ ಇವರು ಯಾವುದೇ ಡೈರಿ ಅಥವಾ ದಾಖಲಾತಿಯಲ್ಲಿ ವಿಲುನಾಮೆಯನ್ನು ಬರೆದಿಟ್ಟಿರುವುದಿಲ್ಲವೆಂದು ಎಂಬುದಾಗಿರುತ್ತದೆ.

**9.** ಪ್ರತಿವಾದಿಯರು ಪಿ. ಆ್ಯಂಡ್ ಎಸ್.ಸಿ ನಂಬರ್ **2/2009** ರ ಆದೇಶ ಪುಟಗಳ ಪ್ರತಿಯನ್ನು ಹಾಜರುಪಡಿಸಿದ್ದು, ಆ ದಾಖಲಾತಿಯನ್ನು ಗಮನಿಸಿದಾಗ ಪ್ರತಿವಾದಿಯರು ಸಲ್ಲಿಸಿದಂತಹ ಅರ್ಜಿಯು ಪುರಸ್ಕೃತವಾಗಿದ್ದು, ಅವರುಗಳ ಪರವಾಗಿ ಉತ್ತರಾಧಿಕಾರ ಪ್ರಮಾಣ ಪತ್ರವನ್ನು ನೀಡಿರುವುದು ಕಂಡು ಬರುತ್ತದೆ. ಪ್ರತಿವಾದಿಯರು ರಂಗಯ್ಯ ಇವರ ವಾರಸುದಾರರು ಎನ್ನುವ

ಕುರಿತು ಯಾವುದೇ ತಕರಾರು ನ್ಯಾಯಾಲಯದ ಸಮಕ್ಷಮ ಇದ್ದಿರುವುದಿಲ್ಲ. ವಾದಿಯು ತಾನು ಜಿ.ಪಿ.ಎ. ಮತ್ತು ವಿಲುನಾಮೆಯ ಆಧಾರದ ಮೇರೆಗೆ ಮಾಲೀಕರು ಎಂದು ಘೋಷಣೆ ಮಾಡಬೇಕೆಂದು ನ್ಯಾಯಾಲಯಕ್ಕೆ ಕೋರಿಕೊಂಡಿದ್ದು, ಆದರೆ ವಿಲುನಾಮೆ ಪುರಾವೆಯಾಗದೇ ವಾದಿಯವರು ದಾವಾ ಆಸ್ತಿಗಳಲ್ಲಿ ಸ್ವಾಧೀನದಲ್ಲಿದ್ದಾರೆ ಹಾಗೂ ಮಾಲೀಕರು ಎಂದು ತೀರ್ಮಾನಿಸಲು ಸಾಧ್ಯವಿಲ್ಲ.

10. ವಾದಿಯು ನೋಂದವಣೆಯಾಗದಂತಹ ವಿಲುನಾಮೆಯ ಪ್ರತಿಯನ್ನು ಹಾಜರುಪಡಿಸಿರುತ್ತಾರೆ. ಈ ಹಂತದಲ್ಲಿ ಆ ವಿಲುನಾಮೆಯು ಪುರಾವೆಯಾಗದೇ ಆ ದಾಖಲಾತಿಯನ್ನು ನ್ಯಾಯಾಲಯವು ಪರಿಗಣಿಸುವಂತಿಲ್ಲ. ವಾದಿಯರು ದಾವಾ ಆಸ್ತಿಗಳಿಗೆ ಮಾಲೀಕರು ಮತ್ತು ದಾವಾ ಆಸ್ತಿಗಳಲ್ಲಿ ಅವರು ಸ್ವಾಧೀನದಲ್ಲಿ ಇದ್ದಾರೆ ಎಂದು ಖಂಡನೆಯನ್ನು ತೆಗೆದುಕೊಂಡಿರುತ್ತಾರೆ. ಮಾಲೀಕತ್ವವನ್ನು ಪುರಾವೆಗೊಳಿಸಲು ಹಾಜರುಪಡಿಸಿದ ದಾಖಲಾತಿಗಳಲ್ಲಿದ್ದ ಅಂಶವನ್ನು ವಾದಿಯರು ಪುರಾವೆಗೊಳಿಸಬೇಕಾಗುತ್ತದೆ. ಈ ಹಂತದಲ್ಲಿ ಅದರ ಬಗ್ಗೆ ತೀರ್ಮಾನಿಸಲು ಸಾಧ್ಯವಿಲ್ಲ.

11. ವಾದಿಯರು ಮತ್ತು ಪ್ರತಿವಾದಿಯರು ಹಾಜರುಪಡಿಸಿದ ದಾಖಲಾತಿಗಳನ್ನು ಗಮನಿಸಿದಾಗ, ಹಲವಾರು ವರ್ಷಗಳಿಂದ

ವಾದಿಯರು ಮತ್ತು ಪ್ರತಿವಾದಿಯರ ಮಧ್ಯೆ ವ್ಯಾಜ್ಯಗಳು ಚಾಲ್ತಿಯಲ್ಲಿರುವುದು ಕಂಡು ಬರುತ್ತದೆ. ದಾವಾ ಆಸ್ತಿಗಳನ್ನು ಗಮನಿಸಿದಾಗ, ದಾವಾ ಆಸ್ತಿಗಳ ಪಹಣಿ ಪತ್ರಿಕೆಯಲ್ಲಿ 1 ನೇ ಪ್ರತಿವಾದಿಯರ ಹೆಸರು ಕಬ್ಜೆ ಮತ್ತು ಸ್ವಾಧೀನದಾರರ ಕಾಲಂನಲ್ಲಿ ನಮೂದಾಗಿರುತ್ತದೆ. ವಾದಿಯರು ಮತ್ತು ಪ್ರತಿವಾದಿಯರು ಇಬ್ಬರೂ ಕೂಡ ತಾವು ದಾವಾ ಆಸ್ತಿಗಳಲ್ಲಿ ಸ್ವಾಧೀನದಲ್ಲಿ ಇದ್ದೇವೆ ಎಂದು ಖಂಡನೆಯನ್ನು ತೆಗೆದುಕೊಂಡಿರುತ್ತಾರೆ.

12. ವಾದಿಯರು ಈ ದಾವೆಯನ್ನು ಪ್ರತಿವಾದಿಯರ ವಿರುದ್ಧ ಘೋಷಣಾತ್ಮಕ ಮತ್ತು ಶಾಶ್ವತ ನಿರ್ಬಂಧಕಾಜ್ಞೆಯ ಆದೇಶವನ್ನು ಕೋರಿ ಸಲ್ಲಿಸಿದ್ದು, ಅವರು ಕೇವಲ ಈ ದಾವೆ ಮುಗಿಯುವವರೆಗೆ ದಾವಾ ಆಸ್ತಿಗಳನ್ನು ಮಾರಾಟ ಮಾಡ ಬಾರದೆಂದು ಮತ್ತು ಋಣಭಾರ ವಹಿಸಬಾರದೆಂದು ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡುವಂತೆ ಕೋರಿರುತ್ತಾರೆ. ರಂಗಯ್ಯ ಇವರು ಅಸಲು ದಾವಾ - 242/2009 ರಲ್ಲಿ ವಿಲುನಾಮೆಯನ್ನು ಪುರಾವೆಗೊಳಿಸಿಲ್ಲ ಎಂಬ ಅಂಶವನ್ನು ನಮೂದು ಮಾಡಿದ್ದರು ಕೂಡ ಈ ಬಗ್ಗೆ ಯಾವುದೇ ವಿವಾದಾಂಶವು ರಚಿತವಾಗಿರುವುದಿಲ್ಲ. ಆದ್ದರಿಂದ, ವಿವಾದಾಂಶ ರಚಿತವಾಗದೇ, ಅದನ್ನು ಪುರಾವೆಗೊಳಿಸಲು ಅವಕಾಶ ನೀಡದೇ ವಿಲುನಾಮೆ ಪುರಾವೆಯಾಗಿಲ್ಲ ಎಂದು ಈ ಹಂತದಲ್ಲಿ ಪರಿಗಣಿಸಲು ಸಾಧ್ಯವಿಲ್ಲ.

13. ಮರಣ ಶಾಸನವನ್ನು ಯಾವುದೇ ಒಬ್ಬ ವ್ಯಕ್ತಿ ತನ್ನ ಸಂಬಂಧಿಕರಿಗೆ ಬರೆದುಕೊಡಬೇಕು ಎನ್ನುವ ಯಾವುದೇ ರೀತಿಯ ನಿರ್ಬಂಧ ಇರುವುದಿಲ್ಲ. ಆದರೆ ವಿಲುನಾಮೆಯನ್ನು ಪುರಾವೆಗೊಳಿಸಲು ಮತ್ತು ಅದನ್ನು ಖಂಡಿಸಲು ಉಭಯ ಪಕ್ಷಗಾರರಿಗೆ ಅವಕಾಶ ನೀಡಬೇಕಾಗುತ್ತದೆ. ಒಂದು ವೇಳೆ ದಾವೆಯು ಡಿಕ್ರಿಯಾದಲ್ಲಿ ಪ್ರತಿವಾದಿಯು ದಾವಾ ಆಸ್ತಿಯನ್ನು ಮಾರಾಟ ಮಾಡಿದ್ದಲ್ಲಿ ವಾದಿಗೆ ತುಂಬಲಾರದ ನಷ್ಟ ಉಂಟಾಗುತ್ತದೆ.

14. ಈ ಹಂತದಲ್ಲಿ ದಾವಾ ಆಸ್ತಿಯನ್ನು ಮಾರಾಟ ಮಾಡಲು ಪ್ರಯತ್ನಿಸಿದ್ದಾರೋ ಅಥವಾ ಇಲ್ಲವೋ ಎನ್ನುವ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸುವಂತಹ ಅವಶ್ಯಕತೆ ಇರುವುದಿಲ್ಲ. ಆದರೆ ದಾವೆಯು ವಿವಾದದಲ್ಲಿರುವಾಗ ದಾವಾ ಸ್ವತ್ತಿಗೆ ಹಾನಿಯಾಗುತ್ತದೆ ಎಂಬ ಭಯವಿದ್ದರೂ ಕೂಡ ಅದನ್ನು ತಡೆಯುವುದು ಅವಶ್ಯಕತೆಯಾಗಿರುತ್ತದೆ. ಆದ್ದರಿಂದ, ಪ್ರತಿವಾದಿಯವರು ದಾವೆಯು ಚಾಲ್ತಿಯಲ್ಲಿರುವಾಗ ದಾವಾ ಆಸ್ತಿಯನ್ನು ಕೇವಲ ಪರಭಾರೆ ಮಾಡದಂತೆ ಮತ್ತು ನಷ್ಟ ಮಾಡದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡುವುದು ಸೂಕ್ತವೆಂದು ಈ ನ್ಯಾಯಾಲಯವು ಅಭಿಪ್ರಾಯಿಸಿರುತ್ತದೆ. ಈ ಹಂತದಲ್ಲಿ ಮೇಲ್ನೋಟಕ್ಕೆ ವಾದಿಯರು ಸಮ್ಮತವಾದ ದಾವೆಯನ್ನು ಹೊಂದಿದ್ದಾರೆಂದು ಕಂಡು

ಬಂದಿರುತ್ತದೆ. ಆದ್ದರಿಂದ, ಅಂಶ-1 ನ್ನು ಭಾಗಶಃ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

15. **ಅಂಶ**-2 **ರಿಂದ** 4- ಈ ಎಲ್ಲಾ ಅಂಶಗಳು ಒಂದಕ್ಕೊಂದು ಪೂರಕವಾಗಿದ್ದರಿಂದ, ಅವುಗಳನ್ನು ಏಕಕಾಲಕ್ಕೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

ದಾವೆಯು ವಿವಾದದಲ್ಲಿರುವಾಗ ಯಾವುದೇ ಸ್ವತ್ತು ದಾವೆಯ ಯಾವುದೇ ಪಕ್ಷಗಾರರಿಂದ ಹಾನಿಗೊಳಗಾಗುವ ಅಥವಾ ಪರಭಾರೆ ಮಾಡುವ ಅಥವಾ ವಾದಿಯ ಸ್ವಾಧೀನದಿಂದ ತಪ್ಪಿಸುವುದಕ್ಕಾಗಿ ಪ್ರಯತ್ನ ಮಾಡುತ್ತಿದ್ದಲ್ಲಿ ಮುಂದಿನ ಆದೇಶವಾಗುವವರೆಗೆ ಅಂತಹ ಕೃತ್ಯವನ್ನು ನಿಗ್ರಹಿಸುವ ಮೂಲಕ ನ್ಯಾಯಾಲಯವು ಆದೇಶದ ಮೂಲಕ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಬಹುದಾಗಿದೆ ದಾವಾ ಸ್ವತ್ತಿನ ಬಗ್ಗೆ ವಾದಿಸುತ್ತಿರುವ ಪಕ್ಷಗಾರರು ತಮ್ಮ ಹಕ್ಕುಗಳನ್ನು ನಿರ್ಣಯಿಸುವವರೆಗೆ ದಾವಾ ಸ್ವತ್ತಿನ ಸ್ಥಿತಿ-ಗತಿಗಳನ್ನು ದಾವೆ ಹೂಡುವಾಗ ಇದ್ದ ಸ್ಥಿತಿಯಲ್ಲಿ ಇರಿಸಿಕೊಂಡು ಹೋಗಬೇಕೆಂದು ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಮಾಡಬೇಕೆಂದು ಇರುವ ಇನ್ನೊಂದು ಮಹತ್ವದ ಉದ್ದೇಶವಾಗಿರುತ್ತದೆ.

16. ವಾದಿಯರು ಕೇವಲ ಈ ದಾವೆಯು ಮುಗಿಯುವರೆಗೆ ಪ್ರತಿವಾದಿಯರು ದಾವಾ ಆಸ್ತಿಯನ್ನು ಯಾರಿಗೂ ಯಾವುದೇ

ರೀತಿಯಿಂದ ಪರಭಾರೆ ಮಾಡದಂತೆ ಮತ್ತು ಯಾವುದೇ ಋಣಭಾರ ಹೊರಿಸದಂತೆ ಈ ದಾವೆಯ ಅಂತಿಮ ಆದೇಶ ಆಗುವವರೆಗೂ ಪ್ರತಿವಾದಿಯರಿಗೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಬೇಕೆಂದು ಕೋರಿಕೊಂಡಿರುವುದು ಕಂಡು ಬಂದಿದ್ದು, ಒಂದು ವೇಳೆ ದಾವೆ ಚಾಲ್ತಿಯಲ್ಲಿರುವಾಗ ದಾವಾ ಆಸ್ತಿಯನ್ನು ಪ್ರತಿವಾದಿಯರು ಮಾರಾಟ ಮಾಡಿದ್ದಲ್ಲಿ ವಾದಿಗೆ ತುಂಬಲಾರದ ನಷ್ಟ ಉಂಟಾಗುತ್ತದೆ ಹಾಗೂ ಅನಾನುಕೂಲತೆಯ ಒಲವು ವಾದಿಯರ ಪರವಾಗಿರುತ್ತದೆ. ಆದರೆ ಈ ದಾವೆಯಲ್ಲಿ ಅಂತಿಮ ತೀರ್ಪು ಆಗುವವರೆಗೂ ದಾವಾ ಆಸ್ತಿಯನ್ನು ಬೇರೆ ಯಾರಿಗೂ ಮಾರಾಟ ಮಾಡಬಾರದಂತೆ ಆದೇಶ ಮಾಡಿದ್ದಲ್ಲಿ, ಪ್ರತಿವಾದಿಗೆ ಯಾವುದೇ ರೀತಿಯಾದಂತಹ ತೊಂದರೆ ಉಂಟಾಗುವುದಿಲ್ಲ. ಆದ್ದರಿಂದ, ಮೇಲೆ ಹೇಳಿದ ಕಾರಣಗಳಿಂದಾಗಿ ಅಂಶ-2 ಮತ್ತು 3 ನ್ನು ಸಕಾರಾತ್ಮಕವಾಗಿ ಹಾಗೂ ಅಂಶ-4 ನ್ನು ಭಾಗಶಃ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

17. **ಅಂಶ-5ಃ**- ಮೇಲೆ ಹೇಳಿದ ಕಾರಣಗಳಿಂದ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

ಆದೇಶ

ಅರ್ಜಿದಾರರು / ವಾದಿಯರು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಸಹವರ್ತಿ ಕಲಂ 151 ರಡಿಯಲ್ಲಿ ಸಲ್ಲಿಸಿದ

ಮಧ್ಯಂತರ ಅರ್ಜಿ ಸಂಖ್ಯೆ:1 ನ್ನು ಭಾಗಶಃ ಪುರಸ್ಕರಿಸಲಾಗಿದೆ.

ಪ್ರತಿವಾದಿಯರು ದಾವಾ ಆಸ್ತಿಯನ್ನು ಈ ದಾವೆಯ ಅಂತಿಮ ತೀರ್ಪು ಆಗುವವರೆಗೆ ಯಾರಿಗೂ ಮಾರಾಟ ಮಾಡಬಾರದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಲಾಗಿದೆ.

ಖರ್ಚಿನ ಬಗ್ಗೆ ಯಾವುದೇ ಆದೇಶ ಇರುವುದಿಲ್ಲ.

(ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೇಲೆ ನೇರವಾಗಿ ಉಕ್ತಲೇಖನ ನೀಡಿ, ನಂತರ ಓದಿ, ತಿದ್ದುಪಡಿ ಮಾಡಿ ತೆರೆದ ನ್ಯಾಯಾಲಯದಲ್ಲಿ 17 ನೇ ಫೆಬ್ರವರಿ-2023 ರಂದು ಘೋಷಿಸಲಾಯಿತು)

ಸಹಿ/-
(ಸುಜಾತ ಸುವರ್ಣ ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕಡೂರು.